ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಬಿ. ರಾಚಯ್ಯ.—ಈ ಬುಲ್‌ಡೋಜರ್ಸ್, ಟ್ರ್ಯಾಕ್ಟರ್ಸ್—ಇವುಗಳನ್ನು hire-purchase system ನಲ್ಲಿ ತೆಗೆದುಕೊಳ್ಳುವಾಗ ಅವುಗಳ ಸ್ಥಿತಿಗತಿಗಳನ್ನು ನೋಡಿ ರೈತರು ತೆಗೆದುಕೊಂಡಿರುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಅವು ಸರಿಯಾದ condition ನಲ್ಲಿವೆಯೇ ಎಂಬುದನ್ನು ನೋಡಿಕೊಂಡೇ ತೆಗೆದುಕೊಂಡಿರುತ್ತಾರೆ.

ಶ್ರೀ ಬಿ. ರಾಚಯ್ಯ.—ಹಾಗೆ ತೆಗೆದುಕೊಂಡು ಹೋದವುಗಳಲ್ಲಿ ಕೆಲವು ಸರಿಯಾಗಿಲ್ಲವೆಂದು ಪಾಪಸ್ಸು ಬಂದಿವೆಯೇ ?

ಡಾ॥ ಆರ್. ನಾಗನಗೌಡ.—ಕೆಲವು ಬಂದಿವೆ ; ಅವುಗಳು ರಿಪೇರಿ ಆಗಬೇಕಾಗಿವೆ.

ಶ್ರೀ ಬಿ. ರಾಚಯ್ಯ.— Hire-purchase system ಮೇಲೆ ಬುಲ್‌ಡೋಜರ್ಸ್ ಮತ್ತು ಟ್ರ್ಯಾಕ್ಟರ್ಸ್ ಕೊಟ್ಟಿರುವುದರಿಂದ ಈ ಹಣವನ್ನು ವಸೂಲುಮಾಡತಕ್ಕ ಅಧಿಕಾರವಿದೆಯೇ ?

ಡಾ॥ ಆರ್. ನಾಗನಗೌಡ.—ಅದು instalment loan ಆದುದರಿಂದ ಆ ಹಣವನ್ನು ಅವರು ಪಾವತಿ ಮಾಡಲೇಬೇಕು.

ಶ್ರೀ ಬಿ. ರಾಚಯ್ಯ.—ಇದನ್ನು ವಸೂಲು ಮಾಡುವ ಏಜೆನ್ಸಿ ಯಾವುದು ?

ಡಾ॥ ಆರ್. ನಾಗನಗೌಡ.—ಡೈರೆಕ್ಟರ್ ಆಫ್ ಅಗ್ರಿಕಲ್ಚರ್.

Bull-dozers and Tractors

Q.—984. **Sri D. R. KARI GOWDA** (Hassan).—

Will the Government be pleased to state :—

(*a*) the number of bull-dozers and tractors in the custody of the Agricultural Department in Hassan District ;

(*b*) the total number of hours that the bull-dozers have worked and the places where they have worked till now from 1st January 1953 ;

(*c*) the number of acres of land ploughed, the places in which such lands have been ploughed by each tractor from 1st January 1953 ;

(*d*) the amount spent on the establishment and other equipments of these tractors from 1st January 1953 ?

A.—**Dr. R. NAGAN GOWDA** (Minister for Agriculture).—

Tractors.

(*a*)—

5 in January and February 1953.
4 in March and April 1953.
3 in May, June and July 1953.
2 in August, September, October and November 1953.
1 in December 1953 and January 1954.

Bull-dozers

2 from January to September 1953.

Nil—October 1953.

1 during November and December 1953, and January 1954.

(*b*) (i) 1,760 hours.

(ii) Konanur, Yelavare, Kattepura, Arasikere, Kadalur, Jalagaranahally, Hullekere, Konanpur, Arsikere, Hole-Narasipur, Arkalgud, Ullival, Arkalgud, Hole-Narasipur, Hassan and Hassan Town Municipality.

(*c*)

	A.	G.
(i)	340	2

(ii) Information as to the places in which lands have been ploughed by each tractor is not readily available. Places in which lands have been ploughed by tractors from 1st January 1953 are noted below :

Belur, Alur, Hassan, Arsikere, Mandya and Hole-Narasipur.

(*d*) (i) Tractor Rs. 3,927-4-0
Bull-dozer Rs. 23,462-0-0

Total Rs. 27,389-4-0

ಶ್ರೀ ಡಿ. ಆರ್. ಕರಿಗೌಡ.—ಹಾಸನ ಡಿಸ್ಟ್ರಿಕ್ಟಿನ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ವಶದಲ್ಲಿ ಎರಡು ಬುಲ್‌ಡೋಜರುಗಳಿವೆಯೆಂದು ತಿಳಿಸಿದ್ದೀರಿ. ಒಂದೇನೋ ಇದೆ. ಇನ್ನೊಂದು ಎಲ್ಲಿದೆ ?

ಡಾ॥ ಆರ್. ನಾಗನಗೌಡ.—ವಿಚಾರಿಸಿ ತಿಳಿಸಬೇಕು.

ಶ್ರೀ ಡಿ. ಆರ್. ಕರಿಗೌಡ.—ವ್ಯವಸಾಯದ ಜಮೀನುಗಳನ್ನು ಸರಿಪಡಿಸುವುದಕ್ಕೆ ಇವುಗಳು ಬೇಕೆಂದು ಇಲ್ಲಿ ಕೆಲವರು ಕೇಳಿದರೂ, ಅವು ದೊರಕದೆ ವ್ಯವಸಾಯದ ಕೆಲಸ ಹಾಗೆಯೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ತುರ್ತಾಗಿ ಎಗ್ಟಿ ಬಿಷ್ಟ ಗ್ರೌಂಡ್ಸ್ ಸರಿಪಡಿಸುವುದಕ್ಕೆ ಇವುಗಳ ಸಹಾಯ ಆಗಬೇಕಾಗಿತ್ತು.

ಶ್ರೀ ಡಿ. ಆರ್. ಕರೀಗೌಡ.—ಟ್ರೌಗಳಲ್ಲಿ ಅಲಂಕಾರಕ್ಕಾಗಿ ಇವುಗಳನ್ನು ಉಪಯೋಗಿಸುವುದು ಹೆಚ್ಚು ಅಗತ್ಯವೇ ಅಥವಾ ವ್ಯವಸಾಯಕ್ಕಾಗಿ ಕೇಳಿದಕಡೆ ಇವುಗಳನ್ನು ಉಪಯೋಗಕ್ಕೆ ಕೊಡುವುದು ಹೆಚ್ಚು ಅಗತ್ಯವೇ ?

ಡಾ॥ ಆರ್. ನಾಗನಗೌಡ.—ಆ ಸಂದರ್ಭದಲ್ಲಿ ಆ ಕೆಲಸದ ಅಗತ್ಯ ಹೆಚ್ಚಾಗಿತ್ತು.

ಶ್ರೀ ಡಿ. ಆರ್. ಕರಿಗೌಡ.—ಕಳೆದ 2-3 ತಿಂಗಳಿಂದಲೂ ಟ್ರೌ ಉಪಯೋಗಕ್ಕೇ ಇವುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರಲ್ಲವೇ ?

ಡಾ॥ ಆರ್. ನಾಗನಗೌಡ.—ತಿಳಿಯದು.

ಶ್ರೀ ಡಿ. ಆರ್. ಕರಿಗೌಡ.—ಈಗಲಾದರೂ ಹಾಸನ ಡಿಸ್ಟ್ರಿಕ್ಟ್‌ಗೆ ಈ ಬುಲ್‌ಡೋಜರುಗಳನ್ನು ಒದಗಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಪ್ರಯತ್ನ ಮಾಡೋಣ.

ಶ್ರೀ ಡಿ. ಆರ್. ಕರೀಗೌಡ.—ಟ್ರಾಕ್ಟರ್ ವಿಚಾರದಲ್ಲಿ ಈ ವರ್ಷದಲ್ಲಿ 340 ಎಕರೆ 2 ಗುಂಟೆಯಷ್ಟು ಭೂಮಿಯ ಉಳುಮೆ ಕೆಲಸ ಟ್ರಾಕ್ಟರುಗಳಿಂದ ಆಗಿದೆಯೆಂದು ತಿಳಿಸಿದ್ದೀರಿ. ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ ?

ಡಾ॥ ಆರ್. ನಾಗನಗೌಡ.—ಆ ಕೆಲಸವನ್ನು ನಿರ್ವಹಿಸಲು ಎಷ್ಟು efficient ಆಗಿ ಕೆಲಸ ಮಾಡಬೇಕೋ ಅಷ್ಟು ಮಾಡಿರುತ್ತಾರೆ. ಇದರಲ್ಲಿ ಲಾಭ ನಷ್ಟದ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಇಷ್ಟು ದೊಡ್ಡ ಇಲಾಖೆ ಇದ್ದು, ಐದು ಟ್ರಾಕ್ಟರುಗಳು ಕೆಲಸಮಾಡಿ, ಕೇವಲ 340 ಎಕರೆ 2 ಗುಂಟೆಯಷ್ಟು ಮಾತ್ರ ಉಳುಮೆಯಾಗಿದೆಯೆಂದರೆ, ಅದು ಕೇವಲ ಕಡಮೆಯಲ್ಲವೇ ?

Mr. SPEAKER.—All the five were not there throughout the year. During certain months there were five, three, two and one and so on.

ಶ್ರೀ ಡಿ. ಆರ್. ಕರಿಗೌಡ.—ಒಂದೇ ಒಂದು ಟ್ರಾಕ್ಟರ್ ನರಿಯಾಗಿ ದಿನಕ್ಕೆ ಒಂದು ಗಂಟೆ ಕೆಲಸ ಮಾಡಿದರೆ ಒಂದು ವರ್ಷದಲ್ಲಿ 340 ಎಕರೆಯಷ್ಟು ಭೂಮಿಯನ್ನು ಉಳಬಹುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈ ಟ್ರಾಕ್ಟರ್ಸ್ ಕೆಲಸ ಅಷ್ಟು maximum efficiency reach ಆಗಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಈಗಲಾದರೂ ಈ ಟ್ರಾಕ್ಟರ್ಸ್ ನರಿಯಾಗಿ ಕೆಲಸಮಾಡಲು ಸಾಕಾದಷ್ಟು ಸಿಬ್ಬಂದಿ ವ್ಯವಸ್ಥೆಯನ್ನು ಏರ್ಪಡಿಸುತ್ತೀರಾ ?

Sri H. SIDDAVEERAPPA.—Government have already announced their policy regarding the tractors. We have decided to disband the whole service provided there are others who come forward and take them. ಈಗಿರತಕ್ಕ ಟ್ರಾಕ್ಟರುಗಳನ್ನು ಯಾರಾದರೂ ರೈತರು ತೆಗೆದುಕೊಳ್ಳುವುದಾದರೆ ಅವರಿಗೆ ವಿಶೇಷ ರಿಯಾಯಿತಿಯ ಮೇರೆ ಸರ್ಕಾರದವರು ಕೊಡುತ್ತಾರೆ. Government have come to the conclusion that it is not profitable to them to have these tractors.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ, ಅಲಾಯಿದ ಇನ್ನೆಷ್ಟಿವೆ ?

Dr. R. NAGAN GOWDA.—The exact number I do not know.

Mr. SPEAKER.—It was discussed. There are 121 and 62 are in order.

ಶ್ರೀ ಡಿ. ಆರ್. ಕರೀಗೌಡ.—ಇವುಗಳನ್ನು ಹರಾಜು ಹಾಕಲು ಪ್ರಯತ್ನಪಡುತ್ತೀರಾ ?

ಡಾ॥ ಆರ್. ನಾಗನಗೌಡ.—ಇನ್ನೂ ಕೆಲವು ರಿಪೇರಿ ಆಗಬೇಕಾಗಿವೆ. ರಿಪೇರಿ ಮಾಡಿ ಹರಾಜು ಹಾಕಿದರೆ ಯಾರಾದರೂ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ತಮ್ಮ ಅಭಿಪ್ರಾಯದಲ್ಲಿ ಟ್ರಾಕ್ಟರಿನಿಂದ ದಿನಕ್ಕೆ ಎಷ್ಟು ಎಕರೆ ಉಳಬಹುದು ?

ಡಾ॥ ಆರ್. ನಾಗನಗೌಡ.—ದಿವಸಕ್ಕೆ ಎಷ್ಟು ಗಂಟೆಗಳಕಾಲ ಕೆಲಸವಾಡುತ್ತದೆಂಬುದರ ಮೇರೆ ಅದನ್ನು ನಿರ್ಧರಿಸಬೇಕಾಗುತ್ತದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಆರು ಗಂಟೆ ಕೆಲಸ ಮಾಡಿದರೆ ದಿವಸಕ್ಕೆ ಎಷ್ಟು ಉಳಬಹುದು ?

ಡಾ॥ ಆರ್. ನಾಗನಗೌಡ.—ಯಾವ ಟ್ರಾಕ್ಟರನ್ನು ತಾವು ಮನಸ್ಸಿನಲ್ಲಿಟ್ಟುಕೊಂಡಿದ್ದೀರಿ ?

ಶ್ರೀ ಬಿ. ಎಕ್. ಬೋರಣ್ಣಗೌಡ.—15 H.P. ಉಳ್ಳ ಒಂದು ಟ್ರಾಕ್ಟರ್.

Mr. SPEAKER—It depends upon soil also.

ಶ್ರೀ ಬಿ. ಎಕ್. ಬೋರಣ್ಣಗೌಡ.—ಒಂದು ದಿನಕ್ಕೆ ಒಂದು ಎಕರೆ ಉತ್ತರೆ ಸಾಕೇ ?

ಅಧ್ಯಕ್ಷರು.—ಈ ಟ್ರಾಕ್ಟರ್ಸ್ ನರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಈಗಾಗಲೇ ಹೇಳಿದರಲ್ಲ !

ಶ್ರೀ ಬಿ. ಎಕ್. ಬೋರಣ್ಣಗೌಡ.—ಇನ್ನೂ ಜಾಸ್ತಿ ಟ್ರಾಕ್ಟರ್ಸ್ ಬೇಕೆಂದು ಸಾರ್ವಜನಿಕರು ಕೇಳಿದರೆ ಸರ್ಕಾರದವರು ಏನು ವ್ಯವಸ್ಥೆ ಮಾಡುತ್ತೀರಿ ?

ಡಾ॥ ಆರ್. ನಾಗನಗೌಡ.—ಇರತಕ್ಕ ಟ್ರಾಕ್ಟರ್ಸ್ ಗಳನ್ನು ಒದಗಿಸುತ್ತೇವೆ. ಹೊಸದಾಗಿ ಕೊಂಡು ಕೊಳ್ಳಲು ಆಗುವುದಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈಗಿರತಕ್ಕ ಟ್ರಾಕ್ಟರ್ಸ್ ಪ್ರಯೋಜನವಿಲ್ಲ, ಆದುದರಿಂದ ಹೊಸ ಟ್ರಾಕ್ಟರ್ಸ್ ಬೇಕೆಂದು ಜನರು ಕೇಳಿದರೇನು ಮಾಡುತ್ತೀರಿ ?

ಡಾ॥ ಆರ್. ನಾಗನಗೌಡ.—ಹಾಗೆ ಕೇಳತಕ್ಕವರು hire-purchase systemನಲ್ಲಿ ಕೊಂಡು ಕೊಳ್ಳಲು ವ್ಯವಸ್ಥೆ ಮಾಡಿಕೊಡುತ್ತೇವೆ.